ಅಂಕೋಲದಲ್ಲಿ ಕೃಷಿ ಮಾರುಕಟ್ಟೆಯನ್ನು ಪ್ರಾರಂಭಿಸುವುದು.

406 - ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) : ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರ ಕನ್ನಡ ಜಿಲ್ಲೆಯ ಅಂಕೋಲಾದಲ್ಲಿ ಕೃಷಿ ಮಾರುಕಟ್ಟೆ ಸ್ಥಾಪಿಸುವ ಬಗ್ಗೆ ಸರ್ಕಾರ ಯಾವ ಕ್ರಮ ತೆಗೆದುಕೊಂಡಿದೆ? ಈಗ ಇದು ಯಾವ ಹಂತದಲ್ಲಿವೆ?

ಆ) ಇಲ್ಲಿ ಕೃಷಿ ಮಾರುಕಟ್ಟೆ ಕಾಮಗಾರಿ ಇನ್ನು ಪ್ರಾರಂಭವಾಗದೆ ಇರಲು ಕಾರಣವೇನು?

ಇ) ಇದನ್ನು ಯಾವಾಗ ಪ್ರಾರಂಭ ಮಾಡಲಾಗುವುದು?

ಶ್ರೀ ಹೆಚ್. ನಾಗಪ್ಪ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು) :

ಅ) ಅಂಕೋಲಾದಲ್ಲಿ ಉಪ ಮಾರುಕಟ್ಟೆಯನ್ನು 1960ರಲ್ಲಿ ಸ್ಥಾಪಿಸಲಾಗಿದೆ. ಸ್ವಂತ ಪ್ರಾಂಗಣ ಅಭಿವೃದ್ಧಿಪಡಿಸಲು 10-15 ಎಕರೆ ಜಮೀನನ್ನು ಭೂಸ್ವಾಧೀನಪಡಿಸಿಕೊಳ್ಳಲಾಗಿದೆ. ಭೂಮಾಲೀಕರು ಹೆಚ್ಚಿನ ಪರಿಹಾರಕ್ಕಾಗಿ ಕಾರವಾರದ ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ ಭೂಸ್ವಾಧೀನದ ವಿರುದ್ಧ ದಾವೆ ಹೂಡಿದ್ದಾರೆ. ಪ್ರಕರಣ ನ್ಯಾಯಾಲಯಗಳಲ್ಲಿ ಬಾಕಿ ಇವೆ.

ಆ) ಪ್ರಕರಣಗಳು ನ್ಯಾಯಾಲಯಗಳಲ್ಲಿ ಇರುವುದರಿಂದ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡಿರುವುದಿಲ್ಲ.

ಇ) ದಾವೆಗಳು ಇತ್ಯರ್ಥವಾದ ನಂತರ ಪ್ರಾಂಗಣ ಅಭಿವೃದ್ಧಿಪಡಿಸಲು ಕ್ರಮ ಜರುಗಿಸಲಾಗುವುದು.

ಶ್ರೀ ಕೆ. ವಿಶ್ವೇಶ್ವರ ಹೆಗಡೆ : ಮಾನ್ಯ ಅಧ್ಯಕ್ಷರೆ, 10:15ಎಕರೆ ಜಮೀನನ್ನೇನು ಸರ್ಕಾರ ಸ್ವಾಧೀನ ಮಾಡಿಕೊಂಡಿದೆ ಇದಕ್ಕೆ ಎಷ್ಟು ಹಣವನ್ನು ಸರ್ಕಾರ ಕೊಟ್ಟಿದೆ ಮತ್ತು ಯಾವ ವರ್ಷ ಈ ಹಣವನ್ನು ಕೊಡಬೇಕೆಂದು ಸರ್ಕಾರ ನಿರ್ಧಾರ ಮಾಡಿತು ಹಾಗೂ ಯಾವ ವರ್ಷ ಆ ಹಣವನ್ನು ಪೂರ್ತಿಯಾಗಿ ಕೊಟ್ಟಿತು? ಭೂಮಾಲೀಕರು ಹೆಚ್ಚಿನ ಪರಿಹಾರ ಬೇಕು ಎಂದು ಯಾವಾಗ ನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸಿದರು? ಇದಕ್ಕೆ ಉತ್ತರವನ್ನು ಬಯಸುತ್ತಿದ್ದೇನೆ.

ಶ್ರೀ ಹೆಚ್. ನಾಗಪ್ಪ : ಮಾನ್ಯ ಅಧ್ಯಕ್ಷರೆ, ಈ 10 ಎಕರೆ 15 ಸೆಂಟ್ ಜಾಗವನ್ನು 15.7.1998ರಲ್ಲಿ ನಾವು ಸ್ವಾಧೀನ ಮಾಡಿಕೊಂಡಿದ್ದೇವೆ. ಸುಮಾರು ಮೂರು ಜನರಿಗೆ ಇದು ಸೇರುತ್ತದೆ. ಅದರಲ್ಲಿ ಇವತ್ತು 22 ಲಕ್ಷ ರೂ.ಗಳನ್ನು ಪರಿಹಾರವಾಗಿ ಕೊಟ್ಟಿದ್ದೇವೆ. ಆ ಹಣ ಸಾಕಾಗುವುದಿಲ್ಲವೆಂದು ಅವರು ಉಚ್ಚ ನ್ಯಾಯಾಲಯಕ್ಕೆ ಅಪೀಲ್ ಹೋಗಿದ್ದಾರೆ. ಇನ್ನೊಬ್ಬರು ನಾವು ಜಮೀನನ್ನೇ ಕೊಡುವುದಿಲ್ಲವೆಂದು ಅಪೀಲ್ ಹೋಗಿ ನಮಗೆ ವಿರುದ್ಧವಾಗಿ ಅದು ತೀರ್ಮಾನವಾಗಿದೆ. ಅದರ ಮೇಲೆ ಮತ್ತೆ ನಾವು ಅಪೀಲ್ ಹೋಗಿದ್ದೇವೆ. ಅದು ತೀರ್ಮಾನ ಆದ ಮೇಲೆ ಅಲ್ಲಿ ಅಭಿವೃದ್ಧಿ ಕೆಲಸವನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಕೆ. ವಿಶ್ವೇಶ್ವರ ಹೆಗಡೆ : ಮಾನ್ಯ ಅಧ್ಯಕ್ಷರೆ, ನನ್ನ ಉಪ ಪ್ರಶ್ನೆ ಬಹಳ ಸ್ಪಷ್ಟವಾಗಿತ್ತು. ಅಂಕೋಲದಲ್ಲಿ ಕೃಷಿ ಮಾರುಕಟ್ಟೆ ಪ್ರಾರಂಭವಾಗಬೇಕು ಎಂದು ಕಳೆದ ಮೂರು ವರ್ಷಗಳಿಂದ ನಾನು ಪ್ರಯತ್ನ ಮಾಡುತ್ತಿದ್ದೇನೆ. ಅಲ್ಲಿ ಮಾವು, ಕಲ್ಲಂಗಡಿ, ಶೇಂಗಾ ಇತ್ಯಾದಿ ಅನೇಕ ಬೆಳೆಗಳನ್ನು ಅವರು ಹುಬ್ಬಳ್ಳಿಗೆ ತೆಗೆದುಕೊಂಡು ಹೋಗಿ ಅಲ್ಲಿ ಯಾರೋ ದಲ್ಲಾಳಿಗಳಿಗೆ ಅವರು ಕೇಳುವ ಬೆಲೆಗೆ ಮಾರಾಟ ಮಾಡಬೇಕಾದ ಸ್ಥಿತಿ ಇವತ್ತಿನವರೆಗೂ ಇದೆ. ಆದ್ದರಿಂದ ಅಂಕೋಲದಲ್ಲಿ ಕೃಷಿ ಮಾರುಕಟ್ಟೆ ಪ್ರಾರಂಭವಾಗಬೇಕು ಎಂಬ ಅಪೇಕ್ಷೆಯಿಂದ ನಾನು ಉಪ ಪ್ರಶ್ನೆಗಳನ್ನು ಬಹಳ ಸ್ಪಷ್ಟವಾಗಿ ಕೇಳಿದ್ದೇನೆ. ತಾವು 22 ಲಕ್ಷ ರೂಪಾಯಿಗಳನ್ನು ಪರಿಹಾರವಾಗಿ ಕೊಟ್ಟಿದ್ದೀರಿ, ಆ ಹಣವನ್ನು ಕೊಡಲು ಯಾವ ವರ್ಷ ನಿರ್ಧಾರ ಆಯಿತು? ಯಾವಾಗ ಪೂರ್ಣ ಹಣವನ್ನು ಕೊಟ್ಟಿರಿ? ಎರಡನೆಯದಾಗಿ ಭೂಮಾಲೀಕರು ಈ ಪ್ರಕರಣವನ್ನು ಯಾವಾಗ ನ್ಯಾಯಾಲಯಕ್ಕೆ ತೆಗೆದುಕೊಂಡು ಹೋದರು? 22 ಲಕ್ಷ ಪೂರ್ಣವಾಗಿ ಕೊಟ್ಟಮೇಲೆ ನ್ಯಾಯಾಲಯಕ್ಕೆ ಹೋದರೋ ಅಥವಾ ಮಧ್ಯದಲ್ಲಿ ನ್ಯಾಯಾಲಯಕ್ಕೆ ತೆಗೆದು ಇದನ್ನು ಕೊಂಡು ಹೋದರೋ? ಈ ಪ್ರಕರಣವನ್ನು ಶೀಘ್ರವಾಗಿ ಇತ್ಯರ್ಥಪಡಿಸಲು ಸರ್ಕಾರದಲ್ಲಿ ಏನು ಕ್ರಮ ತೆಗೆದುಕೊಳ್ಳುತ್ತಿದ್ದೀರಿ?

ಶ್ರೀ ಹೆಚ್. ನಾಗಪ್ಪ : ಭೂಸ್ವಾಧೀನ ಆದ ತಕ್ಷಣವೇ 22 ಲಕ್ಷ ರೂಪಾಯಿಗಳನ್ನು ಅಸಿಸ್ಟೆಂಟ್ ಕಮೀಷನರ್‌ರವರಿಗೆ ಕಟ್ಟಿ ಬಿಟ್ಟಿದ್ದೇವೆ. ಅದು ಅವರ ಹತ್ತಿರ ಇದೆ. ಆ ಹಣವನ್ನು ಸಂಬಂಧಪಟ್ಟವರು ಇದುವರೆಗೆ ತೆಗೆದುಕೊಂಡಿಲ್ಲ. ಅನಂತರ ಅವರು ಹೈಕೋರ್ಟ್‌ನಲ್ಲಿ ಚಾಲೆಂಜ್ ಮಾಡಿದರು. ನಮ್ಮ ವಕೀಲರೂ ಸಹ ಈ ಕೇಸನ್ನು ತೆಗೆದುಕೊಂಡಿದ್ದಾರೆ. ಅದು ತೀರ್ಮಾನ ಆದ ತಕ್ಷಣ ಅಲ್ಲಿ ಅಭಿವೃದ್ಧಿ ಕೆಲಸಗಳನ್ನು ತೆಗೆದುಕೊಳ್ಳುತ್ತೇನೆ.

11.00 ಎ.ಎಂ.

ಶ್ರೀ ಹೆಚ್. ನಾಗಪ್ಪ : 1979ರಲ್ಲಿ 2 ಲಕ್ಷ ರೂಪಾಯಿಗಳನ್ನು 11.9.97ರಂದು 10 ಲಕ್ಷ ರೂಪಾಯಿಗಳನ್ನು 12.11.97ರಲ್ಲಿ 5ಲಕ್ಷ ರೂಪಾಯಿಗಳನ್ನು 31.3.98ರಲ್ಲಿ 5ಲಕ್ಷ ರೂಪಾಯಿಗಳನ್ನು ಅಸಿಸ್ಟೆಂಟ್ ಕಮಿಷನರ್‌ರವರಿಗೆ ರೆಮಿಟ್ ಮಾಡಿದ್ದೇವೆ.

ಶ್ರೀ ಕೆ. ವಿಶ್ವೇಶ್ವರ ಹೆಗಡೆ : 1977ರಿಂದ 98ರವರೆಗೆ ಎಲ್ಲಾ ಸೇರಿ 20ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಒಂದು ಕೃಷಿ ಮಾರುಕಟ್ಟೆಯನ್ನು ಅಭಿವೃದ್ಧಿ ಪಡಿಸಬೇಕೆಂದು ಎಷ್ಟೋ ವರ್ಷಗಳಿಂದ ಪ್ರಯತ್ನ ನಡೆಯುತ್ತಿದೆ. ಇದರಲ್ಲಿ ವಿಳಂಬವೇಕಾಗುತ್ತದೆ? ಮಾವಿನ ಹಣ್ಣಿನ ಬೆಳೆಗಾರರಿಗೆ, ಶೇಂಗಾ ಮಾರುವವರು ಕಲ್ಲಂಗಡಿ ಮಾರುವವರೆಲ್ಲಾ ಮಾರಲು ಹುಬ್ಬಳ್ಳಿಗೆ ತೆಗೆದುಕೊಂಡು ಹೋಗಲೆಂಬ ಉದ್ದೇಶ ಸರ್ಕಾರಕ್ಕಿದೆಯೇ? ಇಲ್ಲವಾದರೆ, ಅದನ್ನು ತೀವ್ರಗತಿಯಲ್ಲಿ ಮುಗಿಸಬೇಕಲ್ಲವೇ? 1979ರಲ್ಲಿ ಶುರು ಮಾಡಿ, 1998ರಲ್ಲಿ ಹಣ ಕೊಡಲು ಹೋದರೆ, ಯಾರು ಒಪ್ಪುತ್ತಾರೆ?

ಶ್ರೀ ಹೆಚ್. ನಾಗಪ್ಪ : ಕೋರ್ಟಿನಲ್ಲಿ ಕೇಸ್ ತೀರ್ಮಾನವಾಗುವವರೆಗೆ ಈ ಬಗ್ಗೆ ನಾವೇನೂ ಮಾಡಲಾಗುವುದಿಲ್ಲ.